

# ಲೇಸ್ ಲಾಸ್ಯ

ಫ್ಯಾಷನ್ ಜಗತ್ತಿನಲ್ಲಿ ನಿರಂತರ ವಿಕಸನಗೊಳ್ಳುತ್ತಲೇ ಇರುವ, ದಿನಕ್ಕೊಂದು ಶೈಲಿಯಲ್ಲಿ ಹೊಳಹು ಹೆಚ್ಚಿಸಿಕೊಳ್ಳುವ, ಬಹುವಿಧ ವಸ್ತ್ರಗಳೊಂದಿಗೆ ಮ್ಯಾಚ್ ಮಾಡಿಕೊಳ್ಳಬಹುದಾದ 'ಲೇಸ್ ಡ್ರೆಸ್' ಯುವತಿಯರ ನೆಚ್ಚಿನ ಆಯ್ಕೆ.

■ ಸುಮಾ ಬಿ.

ಸದಾ ಟ್ರೆಂಡಿಯಾಗಿರಲು ಬಯಸುವವರಿಗೆ ಲೇಸ್ ಟಾಪ್ ಎಂದಿಗೂ ಅಚ್ಚುಮೆಚ್ಚು. ನಿತ್ಯದ ಕಚೇರಿ ದಿರಿಸಿಗೆ, ಕಾಲೇಜು ಉಡುಗೆಗೆ, ಸಣ್ಣ ಪುಟ್ಟ ಪಾರ್ಟಿ, ಸ್ನೇಹಿತರ ಭೇಟಿ ಹೀಗೆ ಎಲ್ಲ ಸಂದರ್ಭಕ್ಕೂ ಹೊಂದಿಕೊಳ್ಳುವ ಕ್ಯಾಷುವಲ್ ವಸ್ತ್ರ ಇದು.

ಕಾಟನ್, ನೈಲಾನ್, ಸಿಲ್ಕ್, ಮೆಟಾಲಿಕ್ ಥ್ರೆಡ್... ವಿವಿಧ ಬಗೆಯ ಲೇಸ್ ಉಡುಗೆಗಳು ಫ್ಯಾಷನ್ ಪ್ರಿಯರ ಬರಸೆಳೆದಿವೆ. ನಿತ್ಯವೂ ಹೊಸತನದ ಉಡುಪು ಬಯಸುವವರಿಗೆ ಲೇಸ್ ಟಾಪ್ ಹಾಟ್ ಫೇವರೆಟ್. ಮೊದಲೆಲ್ಲ ಲೇಸ್ ಟಾಪ್ ಅಥವಾ ಲೇಸ್ ಡ್ರೆಸ್ ತೊಡುತ್ತಾರೆಂದರೆ ಅದು 'ಕಾಕ್‌ಟೇಲ್ ಡ್ರೆಸ್' ಎಂತಲೇ ಫ್ಯಾಷನ್ ಜಗತ್ತಿನಲ್ಲಿ ಬಿಂಬಿತವಾಗಿತ್ತು. ಕಚೇರಿ ದಿರಿಸಿಗೆ, ಕಾಲೇಜು ಹುಡುಗಿಯರಿಗೆ ಹೆಚ್ಚು ಸೂಕ್ತವಲ್ಲ ಎನ್ನುವ ಬಿಗುಮಾನವೂ ಇತ್ತು. ಇದಕ್ಕೆ ಲೇಸ್ ಬಟ್ಟೆಗಳು ಪಾರದರ್ಶಕವಾಗಿರುತ್ತವೆ ಎನ್ನುವ ಕಾರಣ ಇದ್ದಿರಬಹುದು. ಆದರೆ ವಸ್ತ್ರವಿನ್ಯಾಸ ಲೋಕ ಮಗ್ಗುಲು ಹೊರಳಿಸಿದೆ. ಎಲ್ಲ ಉಡುಗೆಗಳೂ ಎಲ್ಲ ಕಾಲಕ್ಕೂ,